# ಕುವೆಂಪು ವಿಶ್ವವಿದ್ಯಾಲಯ

## *ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ*

## ನಡಾವಳಿಗಳು

## ಸಭಾ ದಿನಾಂಕ : 30-03-2021

<>\<><>

**ಪ್ರಾಧಿಕಾರಗಳ ವಿಭಾಗ**

ಜ್ಞಾನಸಹ್ಯಾದ್ರಿ, ಶಂಕರಘಟ್ಟ 577 451

ಶಿವಮೊಗ್ಗ ಜಿಲ್ಲೆ.

ಫ್ಯಾಕ್ಸ್: 08282-256262 ☎08282-256148 (ಪ್ರಾಧಿಕಾರಗಳ ವಿಭಾಗ)
ಇ-ಮೇಲ್: drsyndicateku@gmail.com ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ- 577 451

ಸಂಖ್ಯೆ: ಕುವಿ:ಯುಎಟಿ-1:ಎಸಿ.02-21: 36 :2021-22 ದಿನಾಂಕ:23-04-2021 26

ಮಾನ್ಯರೆ,

**ವಿಷಯ: ದಿನಾಂಕ:30-03-2021ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.**

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000ರ ಪ್ರಕರಣ-31(xviii) ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು, ಅಧ್ಯಾಯ-IIರ ಪ್ರಕರಣ- 17ರನ್ವಯ ದಿನಾಂಕ:30-03-2021ರಂದು ವಿಶ್ವವಿದ್ಯಾಲಯದ **ಪ್ರೊ. ಎಸ್.ಪಿ. ಹಿರೇಮಠ ಸಭಾಂಗಣದಲ್ಲಿ** ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು, ಅಧ್ಯಾಯ-IIರ ಪ್ರಕರಣ-17ರ ಕಂಡಿಕೆ (2) ರ ಪ್ರಕಾರ ಸದರಿ ನಡಾವಳಿಗಳನ್ನು ಕಳುಹಿಸಿದ 21 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

***ವಿ.ಸೂ: ಸದರಿ ನಡಾವಳಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಯಥವತ್ತಾಗಿ ಪ್ರಕಟಿಸಲಾಗಿದೆ.***

ತಮ್ಮ ವಿಶ್ವಾಸಿ,

(ಪ್ರೊ. ಎಸ್. ಎಸ್. ಪಾಟೀಲ್)
ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಗೆ,

ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ.

**ಪ್ರತಿಗಳು:-**

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು,ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) ***ನಿರ್ದೇಶಕರು/ಜೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.***
10) ಎಲ್ಲಾ ಅಧ್ಯಕ್ಷರು / ಸಂಚಾಲಕರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ./ಶಿವಮೊಗ್ಗ/ ಕಡೂರು./ ಚಿಕ್ಕಮಗಳೂರು
11) ಎಲ್ಲಾ ಉಪಕುಲಸಚಿವರು./ಸಹಾಯಕ ಕುಲಸಚಿವರುಗಳು/ ಅಧೀಕ್ಷಕರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ ಶಿವಮೊಗ್ಗ.
13) ನಿರ್ದೇಶಕರು, ಕುವೆಂಪು ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಚಿಕ್ಕಮಗಳೂರು. ಕುವೆಂಪು ವಿಶ್ವವಿದ್ಯಾಲಯ
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಕಾರ್ಯಪಾಲಕ ಅಭಿಯಂತರರು, ವಿಶ್ವವಿದ್ಯಾಲಯ ಇಂಜಿನಿಯರಿಂಗ್ ವಿಭಾಗ, ವಿಶ್ವವಿದ್ಯಾಲಯ, ಶಂಕರಘಟ್ಟ.
18) ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಛಯ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
19) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
20) ಕಛೇರಿ ಪ್ರತಿ.

J:VISHWA-UAT-1:AC-PRO-COV-LTR

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:30–03–2021 ರಂದು ಮಂಗಳವಾರ ಪೂರ್ವಾಹ್ನ:11.00 ಗಂಟೆಗೆ ವಿಶ್ವವಿದ್ಯಾಲಯದ "ಪ್ರೊ. ಎಸ್.ಪಿ. ಹಿರೇಮಠ್ ಸಭಾಂಗಣ"ದಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಿದ್ದ ಸದಸ್ಯರು :**

| | | |
|---|---|---|
| 1. | ಪ್ರೊ. ಬಿ.ಪಿ ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಎಸ್.ಎಸ್. ಪಾಟೀಲ್ ಕುಲಸಚಿವರು | ಸದಸ್ಯ ಕಾರ್ಯದರ್ಶಿ |
| 3. | ಪ್ರೊ. ಪಿ. ಕಣ್ಣನ್, ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 4. | ಶ್ರೀ ಕೆ.ಸಿ. ವೀರಭದ್ರಯ್ಯ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಎಸ್.ಎಲ್. ಭೋಜೇಗೌಡ, ವಿಧಾನ ಪರಿಷತ್ ಸದಸ್ಯರು, ಚಿಕ್ಕಮಗಳೂರು. | ಸದಸ್ಯರು |
| 6. | ಡಾ. ಹೆಚ್. ರಾಜೇಶ್ವರಿ ಪ್ರಾಂಶುಪಾಲರು | ಸದಸ್ಯರು |
| 7. | ಡಾ. ವಿಷ್ಣುಮೂರ್ತಿ ಕೆ.ಎ. ಪ್ರಾಂಶುಪಾಲರು | ಸದಸ್ಯರು |
| 8. | ಶ್ರೀ ರಾಜಶೇಖರ ಪಿ.ಬಿ. ಪ್ರಾಂಶುಪಾಲರು | ಸದಸ್ಯರು |
| 9. | ಶ್ರೀಮತಿ ಭಾರತಿ ಪ್ರಾಂಶುಪಾಲರು | ಸದಸ್ಯರು |
| 10. | ಶ್ರೀ ನಟೇಶ ಎಸ್.ಎಂ. ಪ್ರಾಂಶುಪಾಲರು | ಸದಸ್ಯರು |
| 11. | ಶ್ರೀ ಬಿ.ಸಿ. ಬಸವರಾಜಪ್ಪ ಪ್ರಾಂಶುಪಾಲರು | ಸದಸ್ಯರು |
| 12. | ಶ್ರೀ ಮಹಾಲಿಂಗಪ್ಪ ಈ. ಪ್ರಾಂಶುಪಾಲರು | ಸದಸ್ಯರು |
| 13. | ಡಾ. ಎಂ. ಸ್ವಾಮಿ ಪ್ರಾಂಶುಪಾಲರು | ಸದಸ್ಯರು |
| 14. | ಡಾ. ರಾಮಚಂದ್ರ ದೇವರು ಹೆಗಡೆ ಪ್ರಾಂಶುಪಾಲರು | ಸದಸ್ಯರು |
| 15. | ಶ್ರೀ ಚಂದ್ರಶೇಖರ ಎಸ್. | ಸದಸ್ಯರು |
| 16. | ಶ್ರೀ ಎಂ.ಎ. ರಮೇಶ್ ಹೆಗಡೆ | ಸದಸ್ಯರು |
| 17. | ಶ್ರೀಮತಿ ಗೀತಾಂಜಲಿ | ಸದಸ್ಯರು |
| 18. | ಶ್ರೀಮತಿ ಮಮತಾ ಸಾಲಿ | ಸದಸ್ಯರು |
| 19. | ಶ್ರೀ ಕುಮಾರೇಗೌಡ | ಸದಸ್ಯರು |
| 20. | ಶ್ರೀ ಮನೋಜ್ ಸಲ್ದಾನಾ | ಸದಸ್ಯರು |
| 21. | ಡಾ. ರವಿಕಿರಣ ಹೆಚ್.ಕೆ. | ಸದಸ್ಯರು |
| 22. | ಶ್ರೀ ಶಿವಣ್ಣ ಪಿ. | ಸದಸ್ಯರು |
| 23. | ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ ಪ್ರಾಧ್ಯಾಪಕರು | ಸದಸ್ಯರು |
| 24. | ಪ್ರೊ. ರಾಮಚಂದ್ರ ವೈ.ಎಲ್. ಪ್ರಾಧ್ಯಾಪಕರು | ಸದಸ್ಯರು |
| 25. | ಪ್ರೊ. ವೈ.ಎಲ್. ಕೃಷ್ಣಮೂರ್ತಿ ಪ್ರಾಧ್ಯಾಪಕರು | ಸದಸ್ಯರು |
| 26. | ಪ್ರೊ. ರಾಜಾನಾಯಕ ಪ್ರಾಧ್ಯಾಪಕರು | ಸದಸ್ಯರು |
| 27. | ಪ್ರೊ. ರೇಚಲ್ ಕುರಿಯನ್ ಪ್ರಾಧ್ಯಾಪಕರು | ಸದಸ್ಯರು |
| 28. | ಪ್ರೊ. ಜಯರಾಮ್ ಭಟ್. ಡೀನರು, ಕಲಾನಿಕಾಯ | ಸದಸ್ಯರು |
| 29. | ಪ್ರೊ. ರಿಯಾಜ್ ಮಹಮೂದ್ ಡೀನರು, ವಿಜ್ಞಾನ ನಿಕಾಯ | ಸದಸ್ಯರು |
| 30. | ಪ್ರೊ. ಹೆಚ್.ಎನ್. ರಮೇಶ್, ವಾಣಿಜ್ಯ ನಿಕಾಯದ ಡೀನರು, | ಸದಸ್ಯರು |
| 31. | ಡಾ. ಗೀತಾ ಸಿ., ಶಿಕ್ಷಣ ನಿಕಾಯ ಡೀನರು, | ಸದಸ್ಯರು |
| 32. | ಡಾ. ಆರ್.ಹೆಚ್. ವಾಲ್ಮೀಕಿ ಗ್ರಂಥಪಾಲಕರು, (ಪ್ರಭಾರ) | ಸದಸ್ಯರು |
| 33. | ಪ್ರೊ. ಹೆಚ್.ಎಸ್. ಜಯಣ್ಣ, ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ, | ಸದಸ್ಯರು |
| 34. | ಡಾ. ನಾಗರಾಜ. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, | ಸದಸ್ಯರು |
| 35. | ಪ್ರೊ. ಗುರುಲಿಂಗಯ್ಯ ಎಂ., ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ | ಸದಸ್ಯರು |
| 36. | ಡಾ. ಎನ್.ಡಿ. ವಿರೂಪಾಕ್ಷ (ಪ್ರಭಾರ), ನಿರ್ದೇಶಕರು, ದೈಹಿಕ ಶಿಕ್ಷಣ | ಸದಸ್ಯರು |
| 37. | ಶ್ರೀ ಎಸ್. ರಾಮಕೃಷ್ಣ , ಹಣಕಾಸು ಅಧಿಕಾರಿಗಳು | ಸದಸ್ಯರು |
| 38. | ಪ್ರೊ. ಹೆಚ್.ಎಸ್. ಜಯಣ್ಣ, ನಿರ್ದೇಶಕರು ಐ.ಕ್ಯೂ.ಎ.ಸಿ | ವಿಶೇಷ ಆಹ್ವಾನಿತರು |
| 39. | ಪ್ರೊ, ಯೋಗೀಶ್ ಎಸ್.ಎನ್. ನಿರ್ದೇಶಕರು ದೂರ ಶಿಕ್ಷಣ ನಿರ್ದೇಶನಾಲಯ | ವಿಶೇಷ ಆಹ್ವಾನಿತರು |

## ಗೈರು ಹಾಜರಾದ ಸದಸ್ಯರು :

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು — ಸದಸ್ಯರು
2. ಶ್ರೀ ಎಸ್. ರುದ್ರೇಗೌಡ, ವಿಧಾನ ಪರಿಷತ್ ಸದಸ್ಯರು, ಶಿವಮೊಗ್ಗ — ಸದಸ್ಯರು
3. ಶ್ರೀಮತಿ ಶೋಭಾ ಆರ್. ಎಸ್. — ಸದಸ್ಯರು

## ಪ್ರಸ್ತಾವನೆ:

ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರಿಗೆ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಕುವೆಂಪು ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ತಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ರ ಪ್ರಕರಣ 30(i)(ix)ರನ್ವಯ ನೂತನವಾಗಿ ನಾಮ ನಿರ್ದೇಶಿಸಲ್ಪಟ್ಟ ವಿಜ್ಞಾನ ನಿಕಾಯದ ಡೀನರಾದ ಪ್ರೊ. ರಿಯಾಜ್ ಮಹಮೂದ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ಹಾಗೂ ಪ್ರಕರಣ 30(i)(vii) ರನ್ವಯ ಸರ್ಕಾರದಿಂದ ನಾಮನಿರ್ದೇಶನಗೊಂಡ ಶ್ರೀ ಚಂದ್ರಶೇಖರ ಎಸ್. ಶ್ರೀ ಎಂ.ಎ. ರಮೇಶ್ ಹೆಗಡೆ, ಶ್ರೀಮತಿ ಗೀತಾಂಜಲಿ ಶಿವಮೊಗ್ಗ, ಹಾಗೂ ಪ್ರಕರಣ 30(i)(xi) ರನ್ವಯ ಸರ್ಕಾರದಿಂದ ನಾಮನಿರ್ದೇಶನಗೊಂಡ ಶ್ರೀಮತಿ ಮಮತಾ ಸಾಲಿ, ಶ್ರೀ ಕುಮಾರೇಗೌಡ, ಶ್ರೀಮತಿ ಆರ್. ಎಸ್. ಶೋಭಾ, ಶ್ರೀ ಮನೋಜ್ ಸಲ್ಡಾನಾ, ಡಾ. ರವಿಕಿರಣ ಹೆಚ್. ಕೆ. ಮತ್ತು ಶ್ರೀ ಶಿವಣ್ಣ ಪಿ. ಇವರುಗಳನ್ನು ಆತ್ಮೀಯವಾಗಿ ಸಭೆಗೆ ಸ್ವಾಗತಿಸಿ ಪರಿಚಯಿಸಲಾಯಿತು. ಸಭೆಯು ನೂತನ ಸದಸ್ಯರುಗಳಿಗೆ ಅಭಿನಂದನೆ ಸಲ್ಲಿಸಿತು. ವಿದ್ಯಾವಿಷಯಕ ಪರಿಷತ್ತಿನ ಸದಸ್ಯತ್ವದ ಅವಧಿ ಪೂರ್ಣಗೊಂಡ ಶ್ರೀ ಬಿ.ಆರ್. ಲೋಹಿತಾಕ್ಷ, ಶ್ರೀ ಜಿ.ಬಿ. ಪವನ್, ಶ್ರೀ ಅನಿಲ್ ಕುಮಾರ್ ಆರ್. ಹಾಗೂ ಪ್ರೊ. ವಿ. ಕೃಷ್ಣ, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ ಇವರುಗಳು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಅವರನ್ನು ಅಭಿನಂದಿಸಲಾಯಿತು.

ನಂತರ ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ವಿಶ್ವವಿದ್ಯಾಲಯವು ಶೈಕ್ಷಣಿಕವಾಗಿ ಉತ್ತಮ ಸಾಧನೆಯನ್ನು ತೋರುತ್ತಲಿದ್ದು, **ನ್ಯಾಕ್‌ನಲ್ಲಿ 'ಎ' ಶ್ರೇಣಿ ಹಾಗೂ ಎನ್.ಐ.ಆರ್.ಎಫ್ ನಲ್ಲಿ 73ನೇ ಸ್ಥಾನ** ಪಡೆದಿದ್ದು ಈಗಿರುವ ಸ್ಥಾನವನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯುವ ಜವಾಬ್ದಾರಿ ವಿಶ್ವವಿದ್ಯಾಲಯದ ಕುಲಪತಿಗಳು, ಕುಲಸಚಿವರು, ಕುಲಸಚಿವರು(ಪರೀಕ್ಷಾಂಗ) ಇವರುಗಳ ಜೊತೆಯಲ್ಲಿ ಎಲ್ಲಾ ಪ್ರಾಧಿಕಾರಗಳ ಸದಸ್ಯರುಗಳ ಸಹಕಾರ ಅತ್ಯಗತ್ಯವೆಂದರು.

ಕೋವಿಡ್-19 ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡುತ್ತಿಲ್ಲವಾದ್ದರಿಂದ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಅಭಿವೃದ್ಧಿಗೆ ಹಿನ್ನೆಡೆಯಾಗುತ್ತಿರುವುದನ್ನು ಸಭೆಗೆ ವಿವರಿಸಿದರು. ದೂರಶಿಕ್ಷಣದಲ್ಲಿ ಆನ್-ಲೈನ್ ಕೋರ್ಸನ್ನು ಪ್ರಾರಂಭಿಸಲು ಈಗಾಗಲೇ ಪೂರ್ವಭಾವಿ ಕ್ರಮಗಳನ್ನು ಕೈಗೊಂಡಿರುವುದನ್ನು ಸಭೆಗೆ ವಿವರಿಸಿದರು.

ವಿಶ್ವವಿದ್ಯಾಲಯದಲ್ಲಿ ಅನೇಕ ಅಧ್ಯಾಪಕ ಮತ್ತು ಅಧ್ಯಾಪಕೇತರ ಸಿಬ್ಬಂದಿಗಳು ವಯೋನಿವೃತ್ತಿ ಹೊಂದಿದ್ದು, ಪಾಠ ಪ್ರವಚನಗಳಿಗೆ ಬೋಧಕರ ಕೊರತೆಯುಂಟಾಗಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯಕ್ಕೆ ಅಗತ್ಯವಾಗಿರುವ ಬೋಧಕ-ಬೋಧಕೇತರ ಹುದ್ದೆಗಳ ಭರ್ತಿಗಾಗಿ ಈಗಾಗಲೇ ಸರ್ಕಾರಕ್ಕೆ ಕಳುಹಿಸಿಕೊಟ್ಟಿರುವ ಪ್ರಸ್ತಾವನೆಯು ಅನುಮೋದನೆಯಾಗಿ ಬಂದಲ್ಲಿ ಹೆಚ್ಚು ಅನುಕೂಲವಾಗುವುದು ಎಂದರು. ವಿಶ್ವವಿದ್ಯಾಲಯದ ಸರ್ವತೋಮುಖ ಅಭಿವೃದ್ಧಿಗೆ ಎಲ್ಲಾ ವಿದ್ಯಾವಿಷಯಕ ಪರಿಷತ್‌ನ ಸದಸ್ಯರುಗಳು ಸೂಕ್ತ ಸಲಹೆ ಮತ್ತು ಸಹಕಾರವನ್ನು ನೀಡಿ

ವಿಶ್ವವಿದ್ಯಾಲಯವು ಉನ್ನತ ಸ್ಥಾನಕ್ಕೇರಲು ಸಹಕಾರವನ್ನು ನೀಡಬೇಕೆಂದು ಕೋರುವುದಾಗಿ ತಿಳಿಸಿದರು. ಇದಕ್ಕೆ ಎಲ್ಲಾ ಸದಸ್ಯರುಗಳು ಸಮ್ಮತಿ ಸೂಚಿಸಿದರು.

ಬೆಂಗಳೂರು ವಿಶ್ವವಿದ್ಯಾಲಯವು 20 ಹೊಸ ಕೋರ್ಸುಗಳನ್ನು ಪ್ರಾರಂಭಿಸಿದ್ದು, ನಮ್ಮ ವಿಶ್ವವಿದ್ಯಾಲಯವು ಸಹ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಹೊಸ ಹೊಸ ಕೋರ್ಸುಗಳನ್ನು ಪ್ರಾರಂಭಿಸಲು ಎಲ್ಲಾ ಸದಸ್ಯರುಗಳು ಸಲಹೆಗಳನ್ನು ನೀಡುವಂತೆ ಕೋರಿದರು.

ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡರವರು ಮಾತನಾಡಿ ವಿಶ್ವವಿದ್ಯಾಲಯಗಳಲ್ಲಿ ಹೊಸ ಹೊಸ ಕೋರ್ಸುಗಳನ್ನು ಅದರಲ್ಲೂ ಉದ್ಯೋಗ ಸೃಷ್ಟಿಗೆ ಪೂರಕವಾದ ಕೋರ್ಸುಗಳನ್ನು ಗುರುತಿಸಿ ಅವುಗಳನ್ನು ಪ್ರಾರಂಭಿಸಿ ನಿರುದ್ಯೋಗ ಸಮಸ್ಯೆ ನಿವಾರಿಸಲು ಕ್ರಮಕೈಗೊಳ್ಳುವಂತೆ ಕೋರಿದರು.

ಸದಸ್ಯರಾದ ಪ್ರೊ ರೇಚಲ್ ಕುರಿಯನ್ ಇವರು ಮಾತನಾಡುತ್ತಾ, ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಅಡಿಯಲ್ಲಿ ಡಿಪ್ಲೋಮ ಮತ್ತು ಆಡ್-ಆನ್ ಕೋರ್ಸುಗಳನ್ನು ಪ್ರಾರಂಭಿಸುವುದು ಸೂಕ್ತವೆಂದರು.

ಸದಸ್ಯರಾದ ಶ್ರೀ ರಮೇಶ್ ಹೆಗಡೆ ಇವರು ಮಾತನಾಡುತ್ತಾ, ಇಂಜಿನಿಯರಿಂಗ್ ಓದುವ ವಿದ್ಯಾರ್ಥಿಗಳಿಗೆ ಕೊನೆಯ 6 ತಿಂಗಳ ಅವಧಿಯಲ್ಲಿ ಪ್ರಾಯೋಗಿಕವಾಗಿ ಅವರನ್ನು ಸಧೃಡಗೊಳಿಸಲು ಕ್ರಮಕೈಗೊಳ್ಳುವ ಮಾದರಿಯಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಸದೃಢಗೊಳಿಸುವಂತಹ ಕ್ರಮಗಳನ್ನು ಕೈಗೊಳ್ಳುವುದು ಸೂಕ್ತವೆಂದರು.

ಪ್ರೊ. ಬಿ. ಜಯರಾಮಭಟ್ ಇವರು ಮಾತನಾಡುತ್ತಾ, ಸ್ನಾತಕ ಅರ್ಥಶಾಸ್ತ್ರ ಹೊಸ ಪಠ್ಯಕ್ರಮದಲ್ಲಿ ಪ್ರತಿ ಪತ್ರಿಕೆಯಲ್ಲಿ 2 ಗಂಟೆಗಳ ಕೌಶಲ್ಯ ಮತ್ತು ಇತರೆ ಉದ್ಯೋಗಕ್ಕೆ ಪೂರಕವಾದ ಅಂಶಗಳನ್ನು ಅಳವಡಿಸಲಾಗಿದೆ ಎಂದರು. ಸದಸ್ಯರಾದ ಶ್ರಿ ಎಸ್ ಎಲ್. ಭೋಜೇಗೌಡ ಇವರು ಇದೇ ರೀತಿಯಲ್ಲಿ ಇತರೆ ವಿಭಾಗಗಳಲ್ಲೂ ಹೊಸ ಹೊಸ ಕೋರ್ಸುಗಳಲ್ಲಿ ವಿದ್ಯಾರ್ಥಿಗಳಿಗೆ ಉದ್ಯೋಗ ಸೃಷ್ಟಿಯಾಗುವಂತಹ ಅಂಶಗಳನ್ನು ಪಠ್ಯದಲ್ಲಿ ಅಳವಡಿಸಿ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸಲ್ಲಿಸಲು ಕ್ರಮಕೈಗೊಳ್ಳುವಂತೆ ಸಲಹೆ ನೀಡಿದರು.

ಸದಸ್ಯರಾದ ಶ್ರೀ ಕುಮಾರೇಗೌಡ ಇವರು ಮಾತನಾಡುತ್ತಾ, ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸನ್ನು ಪ್ರಾರಂಭಿಸಿದಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗುವುದು ಎಂದರು.

ಸದಸ್ಯರಾದ ಡಾ. ರವಿಕಿರಣ್ ಇವರು ಮಾತನಾಡುತ್ತಾ, 8-10 ವರ್ಷಗಳ ಹಿಂದೆ ಸಹ್ಯಾದ್ರಿ ಕಾಲೇಜಿನಲ್ಲಿ ಪ್ರವಾಸೋದ್ಯಮ ಕೋರ್ಸನ್ನು ಪ್ರಾರಂಭಿಸಿ ನಂತರ ಸಮಸ್ಯೆಯಾಗಿ ಕೋರ್ಸನ್ನು ಮುಂದುವರೆಸದೇ ಮುಚ್ಚಲಾಗಿದೆ ಎಂದು ತಿಳಿದುಬಂದಿದ್ದು ಈ ಬಗ್ಗೆ ಪರಿಶೀಲಿಸುವಂತೆ ಕೋರಿದರು. ಸದಸ್ಯರಾದ ಶ್ರೀ.ಎಸ್.ಎಲ್ ಭೋಜೇಗೌಡ ಇವರು ಮಾತನಾಡುತ್ತಾ ಕೋರ್ಸನ್ನು ವಿದ್ಯಾರ್ಥಿಗಳು ಪೂರ್ಣಗೊಳಿಸಿದರೇ ಇಲ್ಲವೇ ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸದಸ್ಯರಾದ ಪ್ರೊ.ಹೆಚ್.ಎಸ್.ಭೋಜ್ಯಾನಾಯ್ಕ್ ಇವರು ಸಹ್ಯಾದ್ರಿ ಕಾಲೇಜಿನಲ್ಲಿ ಪ್ರಾರಂಭಿಸಲಾದ ಪ್ರವಾಸೋದ್ಯಮ ಕೋರ್ಸಿನ ವಿದ್ಯಾರ್ಥಿಗಳು ಅವಧಿಯನ್ನು ಪೂರೈಸಿದ್ದು ಸ್ನಾತಕ ಮಟ್ಟದಲ್ಲಿ ಕೋರ್ಸನ್ನು ಮುಂದುವರೆಸಲಾಗಿದೆ ಎಂದರು.

ಸದಸ್ಯರಾದ ಶ್ರೀ ಕುಮಾರೇಗೌಡ ಇವರು ಮಾತನಾಡುತ್ತಾ, ಸ್ವ ಸಹಾಯ ಸಂಘಗಳ ಸ್ತ್ರೀ ಶಕ್ತಿ ಸಂಘಗಳಿಗೆ ಹೋಟೆಲ್ ಮ್ಯಾನೇಜ್‌ಮೆಂಟ್ ಮತ್ತು ಕೌಶಲ್ಯ ಅಭಿವೃದ್ಧಿ ಬಗ್ಗೆ ತರಬೇತಿಯನ್ನು ನೀಡುವುದರ ಕುರಿತು ಪರಿಶೀಲಿಸಬೇಕು ಎಂದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್ ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯವು ಎಲ್ಲಾ ಕೋರ್ಸುಗಳನ್ನು ಪ್ರಾರಂಭಿಸಲು ಅವಕಾಶವಿರುವುದಿಲ್ಲ. ಕಾರಣ ಕೋರ್ಸನ್ನು ಪ್ರಾರಂಭಿಸಿದ ಮೇಲೆ ಅದಕ್ಕೆ

ಕೆಲವು ಸಂಸ್ಥೆಗಳು ಮಾನ್ಯತೆ ನೀಡದೇ ಅನೇಕ ಸಮಸ್ಯೆಗಳಾಗಿರುವ ಉದಾಹರಣೆಗಳಿವೆ. ಆದುದರಿಂದ ವಿಶ್ವವಿದ್ಯಾಲಯದಲ್ಲಿ ಯಾವುದೇ ಹೊಸ ಕೋರ್ಸನ್ನು ಪ್ರಾರಂಭಿಸುವ ಪೂರ್ವದಲ್ಲಿ ಅದಕ್ಕೆ ಯುಜಿಸಿ ಮಾನ್ಯತೆ ಇದೆಯೇ, ಇತ್ಯಾದಿಗಳನ್ನು ಪರಿಶೀಲಿಸಿ ನಂತರವೇ ಸಂಬಂಧಿಸಿದ ಅಧ್ಯಯನ ಮಂಡಳಿಯಲ್ಲಿ ಚರ್ಚಿಸಿ ನಂತರ ಮುಂದಿನ ಕ್ರಮಕೈಗೊಳ್ಳುವುದು ಸೂಕ್ತವೆಂದರು.

ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡ ಇವರು ಮಾತನಾಡುತ್ತಾ, ಮೊದಲು ಮೌಲ್ಯಾಧಾರಿತ ಹಾಗೂ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗುವಂತಹ ಕೋರ್ಸುಗಳನ್ನು ಆರಂಭಿಸುವ ಬಗ್ಗೆ ಪರಿಶೀಲಿಸುವಂತೆ ಕೋರಿದರು.

ಸದಸ್ಯರಾದ ಶ್ರೀಮತಿ ಮಮತಾಸಾಲಿ ಇವರು ಮಾತನಾಡುತ್ತಾ, ಯಾವುದೇ ಹೊಸ ಕೂರ್ಸುಗಳನ್ನು ಪ್ರಾರಂಭಿಸುವ ಮುನ್ನ ಅದರ ಸಾಧಕ ಬಾಧಕಗಳನ್ನು ಪರಿಶೀಲಿಸಿ ಮುಂದಿನ ಕ್ರಮಕೈಗೊಳ್ಳುವಂತೆ ಸಲಹೆ ನೀಡಿದರು.

ಸದಸ್ಯರಾದ ಶ್ರೀ. ರಮೇಶ್‌ಹೆಗಡೆ ಇವರು ಮಾತನಾಡುತ್ತಾ, ಜಿ.ಎಸ್.ಟಿ., ಸೇಲ್ಸ್ ಟ್ಯಾಕ್ಸ್ ಹಾಗೂ ತೆರಿಗೆ ಇಲಾಖೆಯ ಕರಗಳ ಬಗ್ಗೆ ಪರಿಣಿತರಿಂದ ಆಗ್ಗಾಗೆ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ಮಾಡಿಸಿದಲ್ಲಿ ಅದು ಅನುಕೂಲವಾಗುವುದು ಎಂದರು.

ಕುಲಸಚಿವರು ಮಾತನಾಡುತ್ತಾ, ಇದುವರೆಗೂ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಪೂರಕವಾಗುವಂತಹ ಹೊಸ ಹೊಸ ಕೋರ್ಸುಗಳನ್ನು ಪ್ರಾರಂಭಿಸಲು ಎಲ್ಲಾ ಸದಸ್ಯರುಗಳು ಸೂಕ್ತ ಸಲಹೆಗಳನ್ನು ನೀಡಿದುದಕ್ಕೆ ಎಲ್ಲರನ್ನೂ ಅಭಿನಂದಿಸುತ್ತಾ ಇಲ್ಲಿಗೆ ಈ ಚರ್ಚೆಯನ್ನು ಮುಕ್ತಾಯಗೊಳಿಸಿ ಮುಂದಿನ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದರು.

ನಂತರ ಕಾರ್ಯಸೂಚಿಯಲ್ಲಿರುವಂತೆ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

**2021:ಎಸಿ-2.01:** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000 ರನ್ವಯ ಘನತೆವೆತ್ತ ಕುಲಾಧಿಪತಿಗಳಿಂದ ಅಂಕಿತಗೊಂಡಿರುವ ಪರಿನಿಯಮಗಳು, ಆಧ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳಿಗೆ ಸಂಬಂಧಿಸಿದ ವರದಿ.

**ನಿರ್ಣಯ:** ಯಾವುದೂ ಇರುವುದಿಲ್ಲ

**2021:ಎಸಿ-2.02:** ಕಾರ್ಯಸೂಚಿಯಲ್ಲಿ ಸೂಚಿಸಲಾಗಿರುವ ಕಾರ್ಯಕಲಾಪದ ಕ್ರಮದಲ್ಲಿ ಬದಲಾವಣೆಗಾಗಿ ಯಾವುದೇ ಗೊತ್ತುವಳಿ ಮಂಡಿಸುವುದು.

**ನಿರ್ಣಯ:** ಯಾವುದೂ ಇರುವುದಿಲ್ಲ

**2021:ಎಸಿ-2.03:** ಮಾನ್ಯ ಕುಲಪತಿಗಳು ಅಥವಾ ಸಿಂಡಿಕೇಟ್ ಮಂಡಿಸಿದ ವಿಷಯಗಳು

**ನಿರ್ಣಯ:** ಯಾವುದೂ ಇರುವುದಿಲ್ಲ

## ಪ್ರಾಧಿಕಾರಗಳ ವಿಭಾಗ

**2021:ಎಸಿ-2.04:** ದಿನಾಂಕ:28-01-2021 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

ಚರ್ಚೆ: ಕುಲಸಚಿವರು ಮಾತನಾಡುತ್ತಾ ಸದಸ್ಯರಾದ ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್ ಇವರು ಮಾತ್ರ ನಡಾವಳಿಗೆ ಆಕ್ಷೇಪಣೆ ಸಲ್ಲಿಸಿದ್ದು ಅದರ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು ಎಂದರು.

ನಿರ್ಣಯ: ದಿನಾಂಕ:28-01-2021ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

**2021:ಎಸಿ-2.05:** ಕಲಾ ನಿಕಾಯದ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ ಕಲಾ ನಿಕಾಯದ ಎಲ್ಲಾ ಸ್ನಾತಕ/ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಯ ನಡಾವಳಿಗಳಿಗೆ ಸಭೆಯ ಅನುಮೋದನೆ ಕೋರಿದರು. ಕಲಾ ನಿಕಾಯದ ಡೀನರಾದ ಪ್ರೊ. ಜಯರಾಮ್ ಭಟ್‌ರವರು ಮಾತನಾಡಿ, ಸ್ನಾತಕ ಪದವಿಯ ಮನ:ಶಾಸ್ತ್ರ ಪಠ್ಯಕ್ರಮದಲ್ಲಿ ಬದಲಾವಣೆಯಾಗಬೇಕಿದ್ದು, ಅದನ್ನು ಪಠ್ಯಕ್ರಮದಲ್ಲಿ ಸರಿಪಡಿಸಿ ಅನುಮೋದನೆಗಾಗಿ ಸಲ್ಲಿಸಿದೆ ಎಂದರು.

ನಿರ್ಣಯ: ಕಲಾ ನಿಕಾಯದ ಸಭೆಯ ನಡಾವಳಿಗಳನ್ನು ಯಥಾವತ್ತಾಗಿ ಅನುಮೋದಿಸಲಾಯಿತು. ಯಾವ ಹೊಸ ಕೋರ್ಸುಗಳನ್ನು ಪ್ರಾರಂಭಿಸಬೇಕು ಎಂಬ ಬಗ್ಗೆ ಎಲ್ಲಾ ಡೀನರುಗಳು ಪರಿಶೀಲಿಸಿ ವರದಿ ನೀಡಿದಲ್ಲಿ ಕ್ರಮ ಕೈಗೊಳ್ಳಬಹುದು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**2021:ಎಸಿ-2.06:** ವಾಣಿಜ್ಯ ನಿಕಾಯ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ ವಾಣಿಜ್ಯ ನಿಕಾಯದ ಡೀನರು ತಮ್ಮ ಅಭಿಪ್ರಾಯವನ್ನು ನೀಡುವಂತೆ ಕೋರಿದರು. ವಾಣಿಜ್ಯ ನಿಕಾಯದ ಡೀನರಾದ ಪ್ರೊ. ಹೆಚ್ ಎನ್ ರಮೇಶ್ ರವರು ಮಾತನಾಡುತ್ತಾ ವಾಣಿಜ್ಯ ನಿಕಾಯದಡಿಯಲ್ಲಿ ಬರುವ ಎಂ.ಬಿ.ಎ., ಎಂ.ಕಾಂ ಮತ್ತು ಸ್ನಾತಕ ವಾಣಿಜ್ಯ ಮತ್ತು ಬಿ.ಬಿ.ಎ ಪದವಿಗಳಿಗೆ ಸಂಬಂಧಿಸಿದ ಅಧ್ಯಯನ ಮಂಡಳಿಗಳ ಸಭಾ ನಡಾವಳಿಗಳು ಅನುಮೋದನೆಗೊಂಡಿದ್ದು, ಸ್ನಾತಕೋತ್ತರ ಎಂ.ಬಿ.ಎ.(ಟಿ.ಟಿ.ಎಂ) ಅಧ್ಯಯನ ಮಂಡಳಿ ನಡಾವಳಿಗಳಲ್ಲಿ ಮಾತ್ರ ಸಣ್ಣ ಮಾರ್ಪಾಡಿಗೆ ಸೂಚಿಸಿದ್ದು ಉಳಿದಂತೆ ಎಲ್ಲಾ ನಡಾವಳಿಗಳು ಅನುಮೋದಿಸಿರುವುದರಿಂದ ವಾಣಿಜ್ಯ ನಿಕಾಯದ ನಡಾವಳಿಗಳನ್ನು ಅನುಮೋದಿಸಬಹುದು ಎಂದರು.

ನಿರ್ಣಯ: ವಾಣಿಜ್ಯ ನಿಕಾಯ ಸಭೆಯ ನಡಾವಳಿಗಳನ್ನು ಪರಿಶೀಲಿಸಿ ಯಥಾವತ್ತಾಗಿ ಸಭೆಯು ಅನುಮೋದಿಸಿತು.

**2021:ಎಸಿ-2.07:** ಶಿಕ್ಷಣ ನಿಕಾಯದ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ ಶಿಕ್ಷಣ ನಿಕಾಯದ ಡೀನರು ತಮ್ಮ ಅಭಿಪ್ರಾಯವನ್ನು ನೀಡುವಂತೆ ಕೋರಿದರು. ಶಿಕ್ಷಣ ನಿಕಾಯದ ಡೀನರಾದ ಡಾ.ಗೀತಾ.ಸಿ ಇವರು ಮಾತನಾಡಿ ಶಿಕ್ಷಣ ನಿಕಾಯದ ಸಭೆಯ ದಿನದಂದು ತಾವು ಅನಿವಾರ್ಯ ಕಾರಣದಿಂದ ಗೈರುಹಾಜರಿದ್ದ ಕಾರಣ ಡಾ.ಜಗನ್ನಾಥ ಕೆ.ಡಾಂಗೆ ಯವರು ಸಭೆಯ ಅಧ್ಯಕ್ಷತೆ ವಹಿಸಿದ್ದಾಗಿ ತಿಳಿಸಿದರು. ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣ ಅಧ್ಯಯನ ಪಠ್ಯಕ್ರಮದಲ್ಲಿ ಸ್ವಲ್ಪ ಬದಲಾವಣೆಯ ಅಗತ್ಯವಿದೆ ಎಂದರು. ಮುಂದುವರೆದು ಮಾತನಾಡಿದ ಡೀನರು, ಬಿ.ಇಡಿ ಪ್ರವೇಶಾತಿಗೆ ಸರ್ಕಾರದ ಸುತ್ತೋಲೆ ಹಾಗೂ ಮಾರ್ಗಸೂಚಿಯಂತೆ ಕ್ರಮವಹಿಸಬೇಕಾಗುತ್ತದೆ ಎಂದು ಹೇಳಿದರು.

ನಿರ್ಣಯ: ಚರ್ಚೆಯ ನಂತರ ಶಿಕ್ಷಣ ನಿಕಾಯದ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

**2021:ಎಸಿ-2.08:** ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ ವಿಜ್ಞಾನ ನಿಕಾಯದ ಡೀನರು ತಮ್ಮ ಅಭಿಪ್ರಾಯವನ್ನು ನೀಡುವಂತೆ ಕೋರಿದರು. ವಿಜ್ಞಾನ ನಿಕಾಯದ ಡೀನರಾದ ಪ್ರೊ. ರಿಯಾಜ್ ಮಹಮೂದ್‌ರವರು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ನಡಾವಳಿಗಳನ್ನು ಅನುಮೋದಿಸಬಹುದು ಎಂದರು.

ನಿರ್ಣಯ: ಚರ್ಚೆಯ ನಂತರ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ನಡಾವಳಿಗಳನ್ನು ಯಥಾವತ್ತಾಗಿ ಅನುಮೋದಿಸಲಾಯಿತು.

**ಶೈಕ್ಷಣಿಕ ವಿಭಾಗ**

**2021:ಎಸಿ–2.09:**ವಿಶ್ವವಿದ್ಯಾಲಯದ ಎಂ.ಬಿ.ಎ ಪದವಿಯ 2020–21ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯ ಕುರಿತು.

ಚರ್ಚೆ: ಸದಸ್ಯರಾದ ಶ್ರೀ.ಎಸ್.ಎಲ್.ಭೋಜೇಗೌಡ ಇವರು ಮಾತನಾಡುತ್ತಾ, ಶೈಕ್ಷಣಿಕ ವೇಳಾಪಟ್ಟಿಯಲ್ಲಿ ತುರ್ತು ಹಾಗೂ ಅನಿವಾರ್ಯ ಸಂಧರ್ಭದಲ್ಲಿ ಮಾರ್ಪಾಡು ಮಾಡಿಕೊಳ್ಳಲು ಅವಕಾಶ ಕಲ್ಪಿಸುವುದು ಸೂಕ್ತವೆಂದರು.

ನಿರ್ಣಯ: ವಿಶ್ವವಿದ್ಯಾಲಯದ ಎಂ.ಬಿ.ಎ ಪದವಿಯ 2020–21ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು ಸಭೆಯು ಅನುಮೋದಿಸಿತು.

**2021:ಎಸಿ–2.10:**ವಿಶ್ವವಿದ್ಯಾಲಯದ ಎಂ.ಸಿ.ಎ ಪದವಿಯ 2020–21ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ಎಂ.ಸಿ.ಎ ಪದವಿಯ 2020–21ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು ಸಭೆಯು ಅನುಮೋದಿಸಿತು.

**2021:ಎಸಿ–2.11:**"ಪ್ರೊ. ಶೇರಿಗಾರ, ವಿಶ್ರಾಂತ ಕುಲಪತಿಗಳು ಹಾಗೂ ನಿವೃತ್ತ ಪ್ರಾಧ್ಯಾಪಕರು, ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ" ಇವರ ಹೆಸರಿನಲ್ಲಿ ದತ್ತಿನಿಧಿ ಉಪನ್ಯಾಸ ಮಾಲಿಕೆಯನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಕುರಿತು.

ಚರ್ಚೆ: ಕುಲಸಚಿವರು ವಿಷಯ ಪ್ರಸ್ತಾಪಿಸಿ ಮಾತನಾಡುತ್ತಾ "ಪ್ರೊ. ಶೇರಿಗಾರ, ವಿಶ್ರಾಂತ ಕುಲಪತಿಗಳು ಹಾಗೂ ನಿವೃತ್ತ ಪ್ರಾಧ್ಯಾಪಕರು, ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ" ಇವರ ಹೆಸರಿನಲ್ಲಿ 2020–21ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದ ಸ್ನಾತಕೋತ್ತರ ಔದ್ಯೋಗಿಕ ರಸಾಯನ ಶಾಸ್ತ್ರ ಅಧ್ಯಯನ ವಿಷಯದಲ್ಲಿ ದತ್ತಿನಿಧಿ ಉಪನ್ಯಾಸ ಮಾಲಿಕೆಯನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಸ್ಥಾಪಿಸುವ ಸಂಬಂಧ ದಾನಿಗಳಾದ ಡಾ. ಬಿ.ಇ. ಕುಮಾರಸ್ವಾಮಿ, ಅಧ್ಯಕ್ಷರು, ಸ್ನಾತಕೋತ್ತರ ಔದ್ಯೋಗಿಕ ರಸಾಯನ ಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ಹಾಗೂ ಹಿಂದಿನ ಸಂಶೋಧನಾ ವಿದ್ಯಾರ್ಥಿಗಳು – ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ ಎಂದರು.

ನಿರ್ಣಯ: ಚರ್ಚೆಯ ನಂತರ **"ಪ್ರೊ. ಶೇರಿಗಾರ, ವಿಶ್ರಾಂತ ಕುಲಪತಿಗಳು ಹಾಗೂ ನಿವೃತ್ತ ಪ್ರಾಧ್ಯಾಪಕರು, ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ"** ಇವರ ಹೆಸರಿನಲ್ಲಿ 2020–21ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದ ಸ್ನಾತಕೋತ್ತರ ಔದ್ಯೋಗಿಕ ರಸಾಯನ ಶಾಸ್ತ್ರ ಅಧ್ಯಯನ ವಿಷಯದಲ್ಲಿ ದತ್ತಿನಿಧಿ

ಉಪನ್ಯಾಸ ಮಾಲಿಕೆಯನ್ನು ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು. ಹಾಗೂ ದಾನಿಗಳಿಗೆ ಅಭಿನಂದನೆ ಸಲ್ಲಿಸಿತು.

**2021:ಎಸಿ–2.12:** 2019–20ನೇ ಸಾಲಿನಿಂದ ಪಿಹೆಚ್.ಡಿ. ಕೋರ್ಸ್‌ವರ್ಕ್‌ನಲ್ಲಿ Research and Publication Ethics ಹೆಚ್ಚುವರಿ ಕ್ರೆಡಿಟ್ ಪತ್ರಿಕೆಯ ಜಾರಿ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಪ್ರಸ್ತಾಪಿಸಿ ಮಾತನಾಡಿ ಯುಜಿಸಿ ನವದೆಹಲಿ ಇವರ ಮಾರ್ಗ ಸೂಚಿಯಂತೆ ಪಿಹೆಚ್.ಡಿ ಕೋರ್ಸ್ ವರ್ಕ್‌ನಲ್ಲಿ ಹೆಚ್ಚುವರಿಯಾಗಿ Research and Publication Ethics (RPE) ಎಂಬ ಪತ್ರಿಕೆಯನ್ನು ಈಗಾಗಲೇ ಅಳವಡಿಸಿಕೊಳ್ಳಲಾಗಿದ್ದು, ಈ ಹೊಸ ಕ್ರೆಡಿಟ್ ಪತ್ರಿಕೆಗೆ ನಿಗದಿಪಡಿಸಲಾದ ಕ್ರೆಡಿಟ್ ಅಂಕಗಳ ವಿವರವನ್ನು ಡೀನರ ಸಭೆಯಲ್ಲಿ ಸಿದ್ದಪಡಿಸಿ ಅಳವಡಿಸಿಕೊಳ್ಳಲಾಗಿದೆ. ಈ ಸಂಬಂಧ ಪಿಹೆಚ್.ಡಿ ಪರಿಷ್ಕೃತ ನಿಯಮಾವಳಿ 2017 ರಲ್ಲಿ ಮಾರ್ಪಾಡು ಮಾಡಬೇಕಾಗಿದ್ದು ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು,

**ನಿರ್ಣಯ:** 2019–20ನೇ ಸಾಲಿನಿಂದ ಪಿಹೆಚ್.ಡಿ. ಕೋರ್ಸ್‌ವರ್ಕ್‌ನಲ್ಲಿ Research and Publication Ethics ಹೆಚ್ಚುವರಿ ಕ್ರೆಡಿಟ್ ಪತ್ರಿಕೆಯ ಜಾರಿಗೊಳಿಸಲು ಸಭೆಯು ಅನುಮೋದನೆ ನೀಡಿತು. ಹಾಗೂ ಪಿಹೆಚ್.ಡಿ ಪರಿಷ್ಕೃತ ನಿಯಮಾವಳಿ 2017 ರಲ್ಲಿ ಮಾರ್ಪಾಡುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲು ಸಭೆಯಲ್ಲಿ ನಿರ್ಣಯಿಸಲಾಯಿತು.

## ಕಾಲೇಜು ಅಭಿವೃದ್ಧಿ ಪರಿಷತ್

**2021:ಎಸಿ–2.13:** 2020–21ನೇ ಸಾಲಿನ ಕಾಲೇಜುಗಳ ಆನ್‌ಲೈನ್ ಸಂಯೋಜನೆ ವರದಿಗಳನ್ನು ಅನುಮೋದನೆಗೆ ಮಂಡಿಸುವ ಬಗ್ಗೆ.

**ಚರ್ಚೆ:** ಕಾಲೇಜು ಅಭಿವೃದ್ಧಿ ಪರಿಷತ್‌ನ ನಿರ್ದೇಶಕರಾದ ಪ್ರೊ. ನಾಗರಾಜ್‌ರವರು 2020–21ನೇ ಸಾಲಿನ ಕಾಲೇಜುಗಳ ಆನ್‌ಲೈನ್ ಸಂಯೋಜನೆ ವರದಿಗಳನ್ನು ಸಭೆಗೆ ಮಂಡಿಸಿ ಅನುಮೋದನೆ ಕೋರಿದರು. ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡರವರು ಮಾತನಾಡಿ ಕೆಲವು ಕಾಲೇಜುಗಳಿಗೆ ಸಂಯೋಜನೆ ದೊರೆಯದ ಕಾರಣ ಆ ಕಾಲೇಜುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಅವಕಾಶವಿದ್ದಲ್ಲಿ ಪರಿಶೀಲಿಸುವಂತೆ ತಿಳಿಸಿದರು. ಸದಸ್ಯರಾದ ಡಾ. ಹೆಚ್. ರಾಜೇಶ್ವರಿಯವರು ಮಾತನಾಡಿ ಅನ್‌ಲೈನ್ ಸಂಯೋಜನೆಗೆ ಸಂಬಂಧಿಸಿದಂತೆ ಪರಿಗಣಿಸುವ ಅಂಕಗಳ ಮಾಹಿತಿಯನ್ನು ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗದಿಂದ ನೀಡಿದಲ್ಲಿ ಸುಧಾರಣೆ ಮಾಡಿಕೊಳ್ಳಲು ಕಾಲೇಜುಗಳಿಗೆ ಅನುಕೂಲವಾಗುತ್ತದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸದಸ್ಯರುಗಳಾದ ಡಾ. ಗೀತಾ ಸಿ. ಮತ್ತು ಪ್ರೊ. ರಿಯಾಜ್ ಮಹಮೂದ್‌ರವರು ಆನ್‌ಲೈನ್ ಸಂಯೋಜನೆಯಲ್ಲಿ ಯಾವುದಕ್ಕೆ ಎಷ್ಟು ಅಂಕಗಳು ನಿಗದಿಯಾಗಿದೆ ಎಂದು ಯಾರಿಗೂ ಗೊತ್ತಾಗುವುದಿಲ್ಲ ಸಂಯೋಜನೆಗೆ ತೆರಳುವ ಅಧ್ಯಕ್ಷರು ಮತ್ತು ಸದಸ್ಯರುಗಳಿಗೇ ತಿಳಿಯಲು ಅವಕಾಶವಿಲ್ಲದಿರುವಾಗ ಕಾಲೇಜುಗಳಿಗೆ ತಿಳಿಸಲು ಹೇಗೆ ಸಾಧ್ಯ ಎಂದರು.

**ನಿರ್ಣಯ:** ಚರ್ಚೆಯ ನಂತರ 2020–21ನೇ ಸಾಲಿನ ಕಾಲೇಜುಗಳ ಆನ್‌ಲೈನ್ ಸಂಯೋಜನೆ ವರದಿಗಳನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

## ಪರೀಕ್ಷಾ ವಿಭಾಗ

**2021:ಎಸಿ-2.14:** ದೂರಶಿಕ್ಷಣದ ಸ್ನಾತಕ / ಸ್ನಾತಕೋತ್ತರ / ಡಿಪ್ಲೋಮಾ / ಪಿ.ಜಿ. ಡಿಪ್ಲೋಮಾ ಮತ್ತು ಇತರೆ ಕೋರ್ಸುಗಳ ಎರಡು ಪಟ್ಟು ಅವಧಿಯಲ್ಲಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಿರುವ ಕುರಿತು.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು (ಪರೀಕ್ಷಾಂಗ) ರವರು ದೂರಶಿಕ್ಷಣದ ಸ್ನಾತಕ / ಸ್ನಾತಕೋತ್ತರ /ಡಿಪ್ಲೋಮಾ / ಪಿ.ಜಿ. ಡಿಪ್ಲೋಮಾ ಮತ್ತು ಇತರೆ ಕೋರ್ಸುಗಳ ಎರಡು ಪಟ್ಟು ಅವಧಿಯಲ್ಲಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಿರುವ ಕುರಿತು ವಿವರಿಸಿದರು, ಸದಸ್ಯರಾದ ಶ್ರೀ ಕುಮಾರೇಗೌಡರವರು ಪರೀಕ್ಷೆ ತೆಗೆದುಕೊಳ್ಳಲು ಒಟ್ಟು ಎಷ್ಟು ವಿದ್ಯಾರ್ಥಿಗಳಿದ್ದಾರೆ ಎಂದರು. ಸದಸ್ಯರಾದ ಶ್ರೀಮತಿ ರೇಚಲ್ ಕುರಿಯನ್ ಮತ್ತು ಶ್ರೀ ರವಿಕಿರಣ್ ರವರು ಪದೇ ಪದೇ ಈ ರೀತಿ ಅವಕಾಶ ನೀಡದೇ ಕೊನೆಯದಾಗಿ ಒಂದು ಅವಕಾಶವನ್ನು ನೀಡಬಹುದು ಎಂದರು. ಸದಸ್ಯರಾದ ಪ್ರೊ. ಹೆಚ್. ಎಸ್. ಭೋಜ್ಯಾನಾಯ್ಕರವರು ಪರೀಕ್ಷೆಗೆ ಅವಕಾಶ ನೀಡಲು ವಿದ್ಯಾವಿಷಯಕ ಪರಿಷತ್‌ಗೆ ಅವಕಾಶವಿರುತ್ತದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ದೂರಶಿಕ್ಷಣದ ಸ್ನಾತಕ / ಸ್ನಾತಕೋತ್ತರ / ಡಿಪ್ಲೋಮಾ / ಪಿ.ಜಿ. ಡಿಪ್ಲೋಮಾ ಮತ್ತು ಇತರೆ ಕೋರ್ಸುಗಳ ಎರಡುಪಟ್ಟು ಅವಧಿಯಲ್ಲಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಿರುವ ಕ್ರಮವನ್ನು ಸಭೆಯು ಅನುಮೋದಿಸಿತು.

**2021:ಎಸಿ-2.14(ಎ):** ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ದ್ವಿ-ಮೌಲ್ಯಮಾಪನ ಪದ್ಧತಿಯನ್ನು ಪುನರ್ ಅಳವಡಿಸುವ ಬಗ್ಗೆ.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು(ಪರೀಕ್ಷಾಂಗ)ರವರು ಸಕಾಲದಲ್ಲಿ ಪರೀಕ್ಷಕರ ಅಲಭ್ಯತೆಯಿಂದ ಫಲಿತಾಂಶ ಪ್ರಕಟಣೆ ವಿಳಂಬವಾಗುತಿದ್ದ ಹಿನ್ನೆಲೆಯಲ್ಲಿ 2019-20ನೇ ಸಾಲಿನಿಂದ ಅನ್ವಯವಾಗುವಂತೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ನಿಯಮಾನುಸಾರ ಚಾಲ್ತಿಯಲ್ಲಿದ್ದ ದ್ವಿ ಮೌಲ್ಯಮಾಪನ ಪದ್ಧತಿಯನ್ನು ಏಕ ಮೌಲ್ಯಮಾಪನ ಪದ್ಧತಿಗೆ ಮಾರ್ಪಡಿಸಲಾಗಿತ್ತು. ಆದರೆ ಇದು ನ್ಯಾಕ್ ಮಾನ್ಯತೆಗೆ ಪೂರಕವಲ್ಲ ಮತ್ತು ಯುಜಿಸಿಯ ನಿಯಮಗಳಿಗೂ ವಿರುದ್ದವಾಗಿರುವುದರಿಂದ ಈ ಪದ್ಧತಿಯನ್ನು ಕೈಬಿಟ್ಟು ರದ್ದುಪಡಿಸಿ ಹಿಂದಿನಂತೆ ದ್ವಿ ಮೌಲ್ಯಮಾಪನ ಪದ್ಧತಿಯನ್ನು ಅಳವಡಿಸುವಂತೆ ವಿಶ್ವವಿದ್ಯಾಲಯದ ಅಧ್ಯಾಪಕರ ಸಂಘದ ಅಧ್ಯಕ್ಷರು ಮನವಿ ಸಲ್ಲಿಸಿರುತ್ತಾರೆ. ಈ ಬಗ್ಗೆ ನಿರ್ಣಯಕ್ಕಾಗಿ ಮಂಡಿಸಿದೆ ಎಂದರು. ಸದಸ್ಯರಾದ ಶ್ರೀ ಗುರುಲಿಂಗಯ್ಯರವರು ಈ ವ್ಯವಸ್ಥೆಯು ಈಗ ನಡೆಯುತ್ತಿರುವ ಪರೀಕ್ಷೆಗಳ ಮೌಲ್ಯಮಾಪನಕ್ಕೆ ಅನ್ವಯವಾಗುವುದೇ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಕುಲಸಚಿವರು(ಪರೀಕ್ಷಾಂಗ)ರವರು ಈಗ ನಡೆಯುತ್ತಿರುವ ಪರೀಕ್ಷೆಗಳಿಂದಲೇ ಈ ಪದ್ಧತಿಯನ್ನು ಅಳವಡಿಸಲು ಸಭೆಯ ಅನುಮೋದನೆ ಕೋರಿದೆ ಎಂದರು,

**ನಿರ್ಣಯ:** ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ದ್ವಿ-ಮೌಲ್ಯಮಾಪನ ಪದ್ಧತಿಯನ್ನು ಪ್ರಸ್ತುತ ನಡೆಯುತ್ತಿರುವ ಪರೀಕ್ಷೆಗಳಿಂದಲೇ ತಕ್ಷಣದಿಂದ ಅನ್ವಯವಾಗುವಂತೆ ಪುನರ್ ಅಳವಡಿಸಲು ಸಭೆಯು ನಿರ್ಣಯಿಸಿತು.

## ಹಣಕಾಸು ವಿಭಾಗ

**2021:ಎಸಿ–2.14(ಬಿ):2021–22ನೇ ಆರ್ಥಿಕ ವರ್ಷದ ಆಯ–ವ್ಯಯ ಅಂದಾಜು ಪರಿಶೀಲನೆ ಮತ್ತು ಅನುಮೋದನೆ ಕುರಿತು.**

**ಚರ್ಚೆ:** ಹಣಕಾಸು ಅಧಿಕಾರಿಗಳು 2021–22ನೇ ಆರ್ಥಿಕ ವರ್ಷದ ಆಯ–ವ್ಯಯ ಅಂದಾಜು ಪಟ್ಟಿಯನ್ನು ಸಭೆಗೆ ಮಂಡಿಸಿದರು. ಸದಸ್ಯರಾದ ಶ್ರೀ ಎನ್. ಡಿ. ವಿರುಪಾಕ್ಷಪ್ಪರವರು ಮಾತನಾಡಿ 2019–20ನೇ ಸಾಲಿನಲ್ಲಿ ಕೋವಿಡ್ 19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಯಾವುದೇ ಕ್ರೀಡಾ ಚಟುವಟಿಕೆಗಳನ್ನು ನಡೆಸಿರುವುದಿಲ್ಲ. ಆದ್ದರಿಂದ ಕ್ರೀಡಾ ಚಟುವಟಿಕೆಗಳಿಗೆ ಮೀಸಲಿರಿಸಲಾಗಿದ್ದ ಸದರಿ ವರ್ಷದ ಮೊತ್ತವನ್ನು ಈ ವರ್ಷ ಬಳಸಿಕೊಳ್ಳಲು ಅನುವು ಮಾಡಿಕೊಡಬೇಕೆಂದು ಕೋರಿದರು. ಹಣಕಾಸು ಅಧಿಕಾರಿಗಳು ಇದಕ್ಕೆ ಅವಕಾಶವಿರುವುದಿಲ್ಲ ಎಂದರು. ಸದಸ್ಯರಾದ ಶ್ರೀ ಎಸ್. ಎಲ್. ಭೋಜೇಗೌಡರವರು ಮಾತನಾಡಿ ಕಳೆದ ಸಾಲಿನಲ್ಲಿ ಕ್ರೀಡಾ ಚಟುವಟಿಕೆಗಳಿಗೆ ವಿದ್ಯಾರ್ಥಿಗಳಿಂದ ಪಡೆದ ಶುಲ್ಕವನ್ನು ವಿದ್ಯಾರ್ಥಿಗಳ ಕ್ರೀಡೆಗೆ ಬಳಸುವಂತೆ ಕೋರಿದರು. ಸದಸ್ಯರಾದ ಗ್ರಂಥಪಾಲಕರು(ಪ್ರಭಾರ) ಇವರು ಮಾತನಾಡಿ ಗ್ರಂಥಾಲಯಕ್ಕೆ ಪುಸ್ತಕಗಳ ಖರೀದಿಗೆ ಪ್ರಸಕ್ತ ಆಯ–ವ್ಯಯದಲ್ಲಿ ಹಣ ಮೀಸಲಿರಿಸಿರುವುದಿಲ್ಲ ಎಂದರು. ಇದಕ್ಕೆ ದನಿಗೂಡಿಸಿದ ಪ್ರೊ.ಎಸ್.ಎನ್ ಯೋಗೀಶ್‌ರವರು ಕೆಲವು ವಿಭಾಗಗಳಿಗೆ ಮಾತ್ರ ಪುಸ್ತಕ ಖರೀದಿಗೆ ಹಣ ಮೀಸಲಿರಿಸಲಾಗಿದ್ದು ಕೆಲವು ವಿಭಾಗಗಳಿಗೆ ಮೀಸಲಿಟ್ಟಿರುವುದಿಲ್ಲ ಎಂದರು. ಸದಸ್ಯರಾದ ಪ್ರೊ. ಹೆಚ್.ಎಸ್. ಭೋಜ್ಯಾ ನಾಯ್ಕ್ ಇವರು ಮಾತನಾಡಿ ಈ ರೀತಿಯ ಪ್ರಸ್ತಾವನೆಗಳಿದ್ದಲ್ಲಿ ನಂತರ ಪೂರಕ ಆಯ–ವ್ಯಯ ಸಿದ್ಧಪಡಿಸುವ ಸಂದರ್ಭದಲ್ಲಿ ಸೇರಿಸಿಕೊಳ್ಳಬಹುದು ಎಂದರು. ಶ್ರೀ ಎಸ್. ಎಲ್. ಭೋಜೇಗೌಡರವರು ಮಾತನಾಡಿ ಆಯವ್ಯಯವನ್ನು ಸಿದ್ಧಪಡಿಸುವ ಪೂರ್ವದಲ್ಲಿ ಎಲ್ಲರೂ ಸೇರಿ ಚರ್ಚಿಸಿ ಎಲ್ಲಾ ಅಂಶಗಳನ್ನೂ ಒಳಗೊಂಡ ಉತ್ತಮ ಆಯ–ವ್ಯಯವನ್ನು ಸಿದ್ದಪಡಿಸುವುದು ಸೂಕ್ತ ಎಂದು ಸಲಹೆ ನೀಡಿದರು. ಮಾನ್ಯ ಕುಲಪತಿಗಳು ಮಾತನಾಡಿ ಮುಂದಿನ ದಿನಗಳಲ್ಲಿ ಆಯ–ವ್ಯಯ ಸಿದ್ದಪಡಿಸುವಾಗ ಎಲ್ಲರೂ ಸೇರಿ ಚರ್ಚಿಸಿ ಕ್ರಮ ಕೈಗೊಳ್ಳುತ್ತೇವೆ ಎಂದರು.

**ನಿರ್ಣಯ:** ಚರ್ಚೆಯ ನಂತರ 2021–22ನೇ ಆರ್ಥಿಕ ವರ್ಷದ ಆಯ–ವ್ಯಯ ಅಂದಾಜು ಪಟ್ಟಿಯನ್ನು ಸಭೆಯು ಅನುಮೋದಿಸಿತು. ಬಿಟ್ಟು ಹೋಗಿರುವ ಅಂಶಗಳನ್ನು ಸೇರ್ಪಡೆಗೊಳಿಸಿ ಮರು ಹೊಂದಾಣಿಕೆ ಮಾಡಿಕೊಳ್ಳಲು ಅನುಮತಿ ನೀಡಿತು.

**2021:ಎಸಿ–2.15: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:**

**ಚರ್ಚೆ:** ಯಾವುದೂ ಇರುವುದಿಲ್ಲ

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ, ಮಾನ್ಯ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದರು.

**ಕುಲಸಚಿವರು** | **ಸಹಿ/–**
**ಕುಲಪತಿಗಳು**

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.